ISSN-2454-678X

ಸಂಪುಟ–3 ಸಂಚಿಕೆ–3, ಎಪ್ರೀಲ್ 01, 2016 ರಿಂದ ಮೇ 15, 2016

17

# ಅಕ್ಕಮಹಾದೇವಿಯ ಹೋರಾಟದ ಹಾದಿ

* ಡಾ.ಎಸ್.ಬಿ.ಚನ್ನಗೌಡ್ರ. ಎಂ.ಎ

* ಮುಖ್ಯಸ್ಥರು ಕನ್ನಡ ವಿಭಾಗ, ಪ್ರಾಂಶುಪಾಲರು ಬಿ.ಆರ್.ತಂಬಾಕದ ಪ್ರಥಮ ದರ್ಜೆ ಕಲಾ ವಾಣಿಜ್ಯ ಹಾಗೂ ವಿಜ್ಞಾನ ಮಹಾವಿದ್ಯಾಲಯ ಹಾಗೂ ಸ್ನಾತಕೋತ್ತರ ಅಧ್ಯಯನ ಕೇಂದ್ರ ಹಿರೇಕೆರೂರು.

ಜಂಗಮವಾಣಿ– 9448789390.

ಲೋಕ ಲೌಕಿಕದ ಸಹಜ ನಿರೀಕ್ಷೆಗಳನ್ನು ಮೀರಿಮಹಾದೇವತ್ವವನ್ನು ಸಂಪಾದಿಸಿಕೊಳ್ಳಬಲ್ಲ ದಿವ್ಯ ಚೇತನಗಳು ಯುಗ–ಯುಗಗಳ ಇತಿಹಾಸದಲ್ಲೇ ಒಂದೋ ಎರಡೋ ಮೂಡಿ ಬರುತ್ತವೆ. ಅಸಮಾನ್ಯ ಉದಾಹರಣೆ ಯೆನಿಸಿ ಕಾಲಾತಿತವಾಗಿ ತಮ್ಮ ಪ್ರಭಾವ ಮುದ್ರೆಯನ್ನು ಮಾನವಕುಲಕೋಟಿಯ ಮೇಲೆ ಉಳಿಸಿಬಿಡುತ್ತವೆ. ಲೋಕ ಸಹಜತೆಗೆ ಅಪವಾದಾತ್ಮಕವಾಗಬಲ್ಲ ವಿಶಿಷ್ಟ ಪ್ರವೃತ್ತಿ–ಪ್ರತಿಕ್ರಿಯೆ–ಸಾದನೆ ಸಿದ್ಧಿಗಳಿಂದ ಪ್ರಪಂಚವನ್ನೆ ತಮ್ಮೆಡೆಗೆ ಆಕರ್ಷಿಸಿಕೊಳ್ಳಬಲ್ಲ ಇಂತಹ ಮಹಾಚೇತನಗಳು ತಮ್ಮ ಸಮಕಾಲೀನ ಬದುಕಿನ ಮೇಲೆ ಬಿರುವ ಪ್ರಭಾವ ತೀರಾ ಗಾಡವಾದುದು. ಸಾರ್ವಜನಿಕ ಮೌಲ್ಯಗಳುಳ್ಳ ಉದಾತ್ತ ಸಂದೇಶವನ್ನು ಸಾರಿ ಸಮಷ್ಠಿ ಹಿತವನ್ನು ಹಾರೈಸಿ ಅದಕ್ಕಾಗಿಯೆ ಬದುಕುವ ಮಹಾತ್ಮರುಗಳು ಕಾಲ ದೇಶ ಭಾಷೆಗಳನ್ನು ಮೀರಿ ಬೇಳೆಯುತ್ತಾರೆ. ತಮ್ಮ ನಾಡಿನ ಸಮಷ್ಠಿ ಆಶಯಕ್ಕೆ ಸಮಕಾಲೀನ ಯುಗ ಧರ್ಮಕ್ಕೆ ಪ್ರತಿನಿಧಿಗಳಾಗುತ್ತಾರೆ. ಮಾನವೀಯತೆ ಜೀವನ ಪ್ರೀತಿ ಮೌಲ್ಯಾಧಾರಿತ ನಡೆ ನುಡಿಗಳಿಂದ ಸ್ವ–ಅನುಭವಗಳ ಸಾಧನೆಯಿಂದ ಮಾನವ ಜೀವನದ ಪರಮೋನ್ನತ ಸಾಪಲ್ಯಕ್ಕೆ ನಿದರ್ಶನರಾಗುತ್ತಾರೆ. ಉದಾಹರಣೆಗೆ ಯೆಸು ಕ್ರೈಸ್ತ ಪೈಗಂಬರ ಮಹಾವೀರ ಬುದ್ಧ ಬಸವ ಹಾಗೂ ಇತ್ತೀಚಿನ ಅರವಿಂದ ಗಾಂಧೀಜಿ ವಿನೋಬಾ ಭಾವೆ ಉದಾತ್ತ ಚಿಂತನೆಯ ಹೃದಯ ವೈಶಾಲ್ಯ ಸತ್ಯ ನಿಷ್ಟ ಬದುಕಿನಿಂದಾಗಿ ವಿಶ್ವಮಾನ್ಯತೆಯನ್ನ ಪಡೆದುಕೊಂಡಿರುವ ಇಂಥ ಮಹಾತ್ಮರ ವ್ಯಕ್ತಿತ್ವವನ್ನು ಇಹದಲ್ಲಿಯೇ ಮಹವನ್ನು ಕಾಣಬಯಸುವ ಅವರ ಆಚಾರ–ವಿಚಾರ ಅಸಾದ್ಯಾವೆನಿಸಿದುದನ್ನು ಸಹಜವಾಗಿ ಸಾಧಿಸಬಲ್ಲ ಅವರ ಅಂತಃಶಕ್ತಿಯ ಅನನ್ಯತೆಯನ್ನು ಸಾಮಾನ್ಯ ಜನತೆ ಭಯಾಶ್ವರ್ಯ ಮಿಶ್ರಿತ ದೃಷ್ಟಿಯಿಂದ ವೀಕ್ಷಿಸುತ್ತಾ ಬಂದಿದ್ದಾರೆ.

ತಮ್ಮ ಭಾವನೆ ಕಲ್ಪನೆಗಳಿಗೆ ನಿಲುಕದ ಅಂತ ವಿರಾಟ್ ವ್ಯಕ್ತಿತ್ವ ಸಿದ್ದಿಯನ್ನು ಗೌರವಾದರಗಳೊಂದಿಗೆ ಸ್ವಾಗತಿಸಿದ್ದಾರೆ. ಇದೊಂದು ತೆರನಾದ ಪ್ರಜ್ಞಾವಂತ ಜನಸಮೂಹವಾದರೆ ಪ್ರಕೃತಿ ಸಹಜವಾದ ಮನೋದೌರ್ಬಲ್ಯಗಳನ್ನು ಮೀರಿದ ಮಹಾ ಪುರುಷರ ಧೀಮಂತ ಚೈತನ್ಯವನ್ನು ಸಾಮಾನ್ಯ ಜನತೆ ಅಂತ ಭವ್ಯ ವ್ಯಕ್ತಿತ್ವಗಳಿಗೆ ಅರೆಮರುಳರು ಹುಚ್ಚರು ಎನ್ನುವ ಪಟ್ಟವನ್ನು ತೋಡಿಸಿ ಅಪಹಾಸ್ಯಗೈದಿರುವುದನ್ನ ಪ್ರಪಂಚದ ಮಹಾಪುರುಷರ ಜೀವನ ಚರಿತ್ರೆಗಳಿಂದ ಪರಿಭಾವಿಸಬಹುದಾಗಿದೆ ಇದಕ್ಕೆ ಮಹಾಶರಣೆ ಅಕ್ಕಮಹಾದೇವಿ ನಡೆದುಬಂದ ದಾರಿ ಹೊರತಾಗಿರುವುದಿಲ್ಲ. ಆಕೆ ತನ್ನ ಜೀವನದಲ್ಲಿ ಇಟ್ಟ ದಿಟ್ಟ ಹೆಜ್ಜೆಯನ್ನ ಈ ಲೇಖನದಲ್ಲಿ ಪರಿಭಾವಿಸಲಾಗಿದೆ.

ಅಕ್ಕ ಮಹಾದೇವಿ ಎಂಬ ಒಂದು ಚರಿತ್ರೆ ನಮ್ಮ ಮದ್ಯೆ ಉದಯಿಸಿದ್ದು ಶಿವಮೊಗ್ಗ ಜಿಲ್ಲೆ ಶಿಕಾರಿಪುರ ತಾಲೂಕು ಉಡುತಡಿಯ ನಿರ್ಮಲ ಶೆಟ್ಟಿ ಮತ್ತು ಸುಮತಿಯರೆಂಬ ದಂಪತಿಗಳ ಉದರದಲ್ಲಿ. ಒಂದು ಹೆಸರೇ ಒಂದು ಚರಿತ್ರೆಯಾಗಿ ನಮ್ಮ ಮದ್ಯೆ ನಿಲ್ಲಬೇಕಾದರೆ ಅದು ಮಾಡಿದ ಸತ್ಕಾರ್ಯಗಳು ಕೂಡ ಇತಿಹಾಸ ಪುಟಗಳನ್ನು ಸೇರಿ ಮನುಕುಲದ ಹೋರಾಟದ ಹಾದಿಗೆ ಅದರಲ್ಲೂ ಸ್ತ್ರಿ ಕುಲದ ಏಳಿಗೆಯ ಶಿಖರಕ್ಕೆ ಮೆಟ್ಟಿಲುಗಳನ್ನು ನಿರ್ಮಿಸಿದೆ ಎಂಬ ಅರ್ಥವನ್ನು ಧ್ವನಿಸುತ್ತದೆ. ಯಾವುದೇ ಒಂದು ಹೋರಾಟ ಆಲೋಚನೆಯಿಂದ ಆರಂಭಗೊಳ್ಳಬೇಕು, ನಾನು ಏನು? ನನ್ನ ಹೋರಾಟ ಯಾವ ನಿಲುವಿನಿಂದ ಪ್ರಕಟಗೊಳ್ಳಬೇಕು ಮತ್ತು ಅದರಿಂದ ಈ ಹದಗೆಟ್ಟ ಸಮಾಜಕ್ಕೆ ಯಾವ ತರದ ಪ್ರಯೋಜನ ಎಂಬ ವಿವೇಚನೆಯ ಮಾರ್ಗವನ್ನು ಅದು ನಿಖರವಾಗಿ ಸೂಚಿಸುವಂತೆ ರೂಪಗೊಳ್ಳಬೇಕು. ಈ ರೀತಿಯ ಸ್ವ ವಿಮರ್ಶೆಯ ಮುಖೇನ ತನ್ನ ಆಲೋಚನೆಯನ್ನು ಆರಂಬಿಸಿದ ಶಿವನ ಬಗೆಗೆ ತನಗೆ ಇದ್ದ ಅದಮ್ಯ ಭಕ್ತಿಯಿಂದ ಚೈತನ್ಯದ ಚಿಲುಮೆಯಾದ ಅಕ್ಕಮಹಾದೇವಿಯ ಹೋರಾಟದ ದಾರಿ ಬಲು ರೋಚಕವೂ ಮತ್ತು ಬಹುಕಾಲ ನಮ್ಮ ಮದ್ಯೆ ಉಳಿಯುವಂತಹದ್ದು.

ಇಡೀ ಪ್ರಾಚೀನ ಭಾರತೀಯ ಸಮಾಜದಲ್ಲಿ ಮಹಿಳೆಗೆ ಕೊಟ್ಟ ಸ್ಥಾನಮಾನದ ವಿಚಾರವಾಗಿ ಅವಲೋಕಿಸಿದಾಗ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣಿನ ಬಗೆಗೆ ನಿಕೃಷ್ಟ ಸ್ಥಾನಮಾನ ಕಿರುಕುಳ ಹಿಂಸೆಗಳ ವಿರುದ್ದ ಹೆಣ್ಣು ತಿರುಗಿ ಬಿದ್ದದ್ದು ಕಡಿಮೆಯೇ ಎಂದು

ಹೇಳಬೆಕಾಗುತ್ತದೆ. ಭಾರತದ ಮೊದಲ ಮಹಾಕಾವ್ಯಗಳು ಎಂದು ಕರೆಸಿಕೊಳ್ಳುವ ರಾಮಾಯಣದ ಸೀತೆಯೇ ಆಗಿರಲಿ ಮಹಾಭಾರತದ ದ್ರೌಪದಿಯೇ ಆಗಿರಲಿ ಇಲ್ಲಿ ಹೆಣ್ಣಿಗೆ ಸಿಕ್ಕ ಸ್ಥಾನಮಾನ ವಿವಾದವಾಗಿ ಅವರು ಪ್ರತಿಭಟನೆ ತೋರಿದ್ದು ತುಂಬಾ ವಿರಳವೆನ್ನಬಹುದು.ಗಂಡು ಹೆಣ್ಣಿನ ನಡುವಣ ಅನುಸಂದಾನದಲ್ಲಿ ಹೆಣ್ಣು ಸೋತು ಗಂಡು ಗೆದ್ದಿದೆ. ಅಂದಿನ ಕಾಲದ ಚಾರಿತ್ರಿಕ ರಾಣಿಯರು ಎಂದು ಕರೆಸಿಕೊಳ್ಳುವ ಸೀತೆ ದ್ರೌಪದಿಯರ ಸ್ಥಿತಿ ಹಿಗಿದ್ದಾಗ ಇನ್ನು ಸಾಮಾನ್ಯ ಮಹಿಳೆಯ ಸ್ಥಿತಿ ಇದಕ್ಕಿಂತ ಭಿನ್ನವಾಗಿ ಇತ್ತು ಎಂಬುದನ್ನು ಹೇಳಬೇಕಾಗಿಲ್ಲ. ಈ ರೀತಿಯ ಎಲ್ಲ ಕಂದಾಚಾರಗಳಿಗೆ ಹಿಂಸೆಗಳಿಗೆ ಸೆಡ್ಡು ಹೊಡೆದು ಪ್ರತಿಭಟನೆ ಗೈದ ಮಹಾಮಹಿಮ ವೀರಾಗ್ರಣಿ ಎಂದರೆ ಅದು ಅಕ್ಕಮಹಾದೇವಿ ಮಾತ್ರ, ಇದೇ ವಿಚಾರಕ್ಕೆ ಇವಳ ಹೋರಾಟದ ಹಾದಿ ಬಲು ರೋಚಕ ಎಂದು ಪ್ರಸ್ತಾಪಿಸಿದ್ದು. ಇದು ಕೇವಲ ಆಕೆಯ ಹೋರಾಟದ ಭವಬಂದನಗಳ ಬಿಡುಗಡೆಯಲ್ಲ ಇದು ಸ್ತ್ರೀಕುಲದ ಬಿಡುಗಡೆಯ ಆಲೋಚನೆಯಾಗಿ ಇಂದು ಹೊಸದೊಂದು ಹಾದಿಯನ್ನೇ ತೋರಿದೆ. ಆಕೆಯ ಹದಿನಾರನೇಯ ಹರೆಯದಲ್ಲಿ ತಂದೆ–ತಾಯಿಗಳಿಗೆ ಕಿರುಕುಳ ನೀಡುತ್ತಾನೆ ಎಂಬ ಕಾರಣಕ್ಕೆ ಕೌಶಿಕನೆಂಬ ಮಹಾರಾಜನನ್ನು ಮದುವೆಯಾಗುವ ಅಕ್ಕ ಅವನಿಗೆ ಹಾಕುವ ಮೂರು ತೆರನಾದ ಷರತ್ತುಗಳು ಕೂಡಾ ಅವಳ ಮಾನಸಿಕ ಮತ್ತು ದೈಹಿಕವಾದ ತಾನು ಸಾಧಿಸಬಹುದಾದ ಶಿವಭಕ್ತಿಯ ಪರಾಕಾಷ್ಠತೆಯನ್ನು ಪ್ರತಿಬಿಂಬಿಸುತ್ತವೆ. ಜೀವನವೆಂದರೆ ಬರಿ ದೇಹ ಸುಖ ಕಾಮಭೋಗ ಜೀವನ ಎಂದು ತಿಳಿದಿದ್ದ ತನ್ನ ಪತಿಗೆ ಷರತ್ತುಗಳ ಮುಖೇನ ವೈರಾಗ್ಯವೇ ಮುಕ್ತಿಯ ಪರಾಕಾಷ್ಟೇ ಎಂಬುದನ್ನು ವಿವರಿಸುತ್ತಾಳೆ ಮತ್ತು ಪ್ರತಿಭಟಿಸುತ್ತಾಳೆ.

- ಪ್ರತಿನಿತ್ಯವೂ ನಾನು ಶಿವಪೂಜೆಯಲ್ಲಿ ತೊಡಗುತ್ತೇನೆ ಅದಕ್ಕೆ ಅರಮನೆಯಲ್ಲಿ ಯಾವುದೇ ಅಡ್ಡಿಯಾಗಬಾರದು,ಸಂಪೂರ್ಣ ಸಹಕಾರವಿರಬೇಕು.
- ಜಂಗಮರನ್ನು ಶಿವಭಕ್ತರನ್ನು ಕರೆದು ನಾನು ದಾಸೋಹ ಮಾಡುತ್ತೇನೆ ಅದಕ್ಕೆ ತೊಂದರೆ ಕೊಡಬಾರದು.
- ನಾನಾಗಿ ಮೆಚ್ಚಿ ನಿನ್ನಲ್ಲಿಗೆ ಬರುವವರೆಗೂ ನೀನು ನನ್ನನ್ನು ಮುಟ್ಟಬಾರದು, ಎಂಬ ಮೂರು ಷರತ್ತು ವಿಧಿಸುತ್ತಾಳೆ.

ಆಕೆಯ ನಿಲುವೇ ಹಾಗಿತ್ತು ನಾನು ಓರ್ವ ಶಿವಭಕ್ತೆ ಇನ್ನೋರ್ವ ಶಿವಭಕ್ತನನ್ನೇವರಿಸಬೇಕೆಂಬುದು ಆಕೆಯ ಮನದ ಬಯಕೆಯಾಗಿತ್ತು.ಚನ್ನಮಲ್ಲಿಕಾರ್ಜನ ಎಂಬ

ಅಂಕಿತದಿಂದ ವಚನಗಳನ್ನು ಲೋಕಕ್ಕೆ ನೀಡಿದ ಅಕ್ಕ ಅವನನ್ನೇ ತನ್ನ ಪತಿಯಾಗಿ ಸ್ವೀಕರಿಸಿದ್ದು ಹೆಚ್ಚುಗಾರಿಕೇಯೆ.

ಸಾವಿಲ್ಲದ ಕೇಡಿಲ್ಲದ ಚಲುವಾಂಗಗೊಲಿದೆನವ್ವಾ, ಈ ಸಾವು ಕೊಡುವ ಗಂಡರನೊಯ್ದು ಒಲೆಯೊಳಗಿಕ್ಕು ಎಂಬ ವಚನದಲ್ಲಿ ತನ್ನ ಆದ್ಯಾತ್ಮದ ಜೊತೆ ಜೊತೆಗೆ ಶೃಂಗಾರವನ್ನು ಬೆಸೆಯುತ್ತಾ ತನ್ನ ಬಯಕೆಯನ್ನು ಪ್ರತಿಭಟಿಸುವ ಅಕ್ಕ ಲೌಕಿಕ ಭೋಗಸುಖವೇ ಶ್ರೇಷ್ಠವಲ್ಲ, ಆದ್ಯಾತ್ಮಿಕ ಸುಖವೇ ಮುಕ್ತಿ ಮಾರ್ಗ ಎಂದು ಸಾರಿದ್ದನ್ನು ಆಕೆಯ ವಚನಗಳಲ್ಲಿ ಕಾಣಬಹುದು. ಕಾಲಾನಂತರದಲ್ಲಿ ನನ್ನ ಮಡದಿ ಬದಲಾಗಬಹುದು ಎಂಬ ಕಾತುರತೆಯಲ್ಲಿ ಇದ್ದ ಕೌಶಿಕ ಒಮ್ಮೆ ಅಕ್ಕಮಹಾದೇವಿ ಶಿವನನ್ನು ಕುರಿತು ದ್ಯಾನಮಗ್ನಳಾಗಿದ್ದಾಗ ಆಕೆಯನ್ನು ಮುಟ್ಟಲು ಹೋದಾಗ ಅಕ್ಕಮಹಾದೇವಿ ಹೇಳುವ ವಚನ ಹೀಗಿದೆ,

ಎಮ್ಮೆಗೊಂದು ಚಿಂತೆ ಸಮಗಾರಗೊಂದು ಚಿಂತೆ
ಧರ್ಮಿಗೊಂದು ಚಿಂತೆ ಕರ್ಮಿಗೊಂದು ಚಿಂತೆ
ಎನಗೆ ಎನ್ನ ಚಿಂತೆ ತನಗೆ ತನ್ನ ಕಾಮದ ಚಿಂತೆ
ಎಲೆ ಹೋಗು ಸೆರಗ ಬಿಡು ಮರುಳೆ
ಎನಗೆ ಚನ್ನಮಲ್ಲಿಕಾರ್ಜನ ದೇವರ ಒಲಿವರೋ ಒಲಿಯರೋ ಎಂಬ ಚಿಂತೆ

ಎಮ್ಮೆ ತಾನು ಬದುಕಿ ಉಳಿವ ಯೋಚನೆಯನ್ನು ಮಾಡಿದರೆ ಸಮಗಾರ ಮಾತ್ರ ಅದು ಯಾವಾಗ ಸಾಯುವುದೋ ಅದರ ಚರ್ಮ ಯಾವಾಗ ನನ್ನ ಕೈ ಸೇರುವುದೋ ಎಂಬ ಚಿಂತೆಯಲ್ಲಿ ಇರುವಂತೆ ನಾನಾ ಜೀವಿಗಳಿಗೆ ನಾನಾ ರೀತಿಯ ಚಿಂತೆ ಇರುವಂತೆ ನನಗೂ ನನ್ನ ಪತಿಯಾದ (ಅಂತರಂಗದ) ಚನ್ನಮಲ್ಲಿಕಾರ್ಜುನ ದೇವರು ಒಲಿಯುವನೋ ಇಲ್ಲವೋ ಎನ್ನುವ ಚಿಂತೆ ಇದೆ. ಆದರೆ ನಿನಗೆ ನಿನ್ನ ಕಾಮದ ಚಿಂತೆ ಎಂದು ಚಾಟಿ ಬೀಸುತ್ತಾಳೆ. ನಾನಾ ರೀತಿಯ ವಿಕಟ ಮಾನಸಿಕ ಯಾತನೆಯ ವಿಘಟನೆಯನ್ನು ಹೊಂದಿ ಭೋಗಭಾಗ್ಯವನ್ನೆಲ್ಲ ತ್ಯಜಿಸಿ ವಿರಕ್ತ ದಿಗಂಬರೆಯಾಗಿ ನಿರಾಕಾರ ಮೂರ್ತಿ ಅಲೌಕಿಕ ಗಂಡನನ್ನು ಅರಸುತ್ತಾ ಹೊರಟ ದಿಟ್ಟ ಧೀಮಂತ ವೀರ ಮಹಿಳೆ ಅಕ್ಕಮಹಾದೇವಿ.

ಆಂತರಿಕ ಹೋರಾಟಕ್ಕು – ಬಾಹ್ಯ ಹೋರಾಟಕ್ಕು ಸಿದ್ದವಿದ್ದಾಗ ಮಾತ್ರ ವಿಮೋಚನೆಯ ಹಾದಿ ದೊರೆಯುವುದು ಎಂಬುದನ್ನು ಅರಿತು ಲೋಕಕ್ಕೆ ತೋರಿದವಳು ಅಕ್ಕಮಹಾದೇವಿ. ಎಲ್ಲವನ್ನು ತ್ಯೆಜಿಸಿ ಹೊರಟ ಅಕ್ಕ ಲೋಕಕ್ಕೆ ಅಂಜಲಿಲ್ಲ.

ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದಡೆಂತಯ್ಯಾ ?
ಸಮುದ್ರದ ತಡಿಯಲ್ಲೊಂದು ಮನೆಯ ಮಾಡಿ ನೊರೆ
ತೆರೆಗಳಿಗಂಜಿದಡೆಂತಯ್ಯಾ ?
ಸಂತೆಯೋಳಗೊಂದು ಮನೆಯ ಮಾಡಿ ಶಬ್ದಕ್ಕೆ ನಾಚಿದಡೆಂತಯ್ಯಾ ?
ಚನ್ನಮಲ್ಲಿಕಾರ್ಜುನದೇವ ಕೇಳಯ್ಯ ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿ
ನಿಂದೆಗಳು ಬಂದಡೆ ಮನದಲ್ಲಿ ಕೋಪವ ತಾಳದೆ
ಸಮಾಧಾನಿಯಾಗಿರಬೇಕು .

ಇದು ಅಕ್ಕಮಹಾದೇವಿ ತನಗೆ ತಾನೇ ದೈರ್ಯ ತುಂಬಿಕೋಳ್ಳುವ ತಂತ್ರದಂತೆ ತೋರಿದರು ಲೋಕನಿಂದೆ ಹೆಣ್ಣನ್ನು ಅನಾದಿ ಕಾಲದಿಂದಲು ಬಿಟ್ಟಿಲ್ಲ ಎಂಬುದನ್ನು ಅದಕ್ಕೆ ಪ್ರತಿಕಾರವೇಂದರೆ ಕೋಪವನ್ನು ತಾಳದೆ ತಾಳ್ಮೆಯಿಂದ ಎದುರಿಸುವ ಜಾಣ್ಮೆ ಹೆಣ್ಣಿಗೆ ಬೇಕು ಎಂಬುದನ್ನು ದಿಗಂಬರೆಯಾಗಿ ಹೊರಟ ಅಕ್ಕ ಎದುರಿಸಿದ ಮಾನಸಿಕ ಮತ್ತು ದೈಹಿಕ ನಿಂದೆಗಳು ಸ್ವ ವಿಮರ್ಶೆಯ ಮೂಲಕ ಹೇಳಿ ಹೋರಾಟದ ಹಾದಿಯನ್ನು ಪ್ರಕಟಿಸುತ್ತಾಳೆ.

ತನ್ನ ಆತ್ಮ ಸಾಂಗತ್ಯಕ್ಕೆ ಚೆನ್ನಮಲ್ಲಿಕಾರ್ಜುನ ಇದ್ದಾನೆ ಎಂದು ನಂಬಿದ್ದ ಅಕ್ಕ ಭಯದ ವಿಚಾರವಾಗಿ ಹೇಳುವ ವಚನವು ಹೆಣ್ಣು ಏಕಾಂಗಿಯಾಗಿ ಸಮಾಜದಲ್ಲಿ ಜೀವಿಸ ಬಲ್ಲಳು ಎಂಬುದನ್ನ ತಿಳಿಸುತ್ತಾಳೆ, ಅದು ಹೀಗಿದೆ,

ಹಸಿವಾದೊಡೆ ಭಿಕ್ಷಾನ್ನಗಳುಂಟು
ತೃಷೆಯಾದೊಡೆ ಕೆರೆ ಬಾವಿಗಳುಂಟು
ಶಯನಕ್ಕೆ ಹಾಳು ದೇಗುಲಗಳುಂಟು
ಆತ್ಮ ಸಂಗಾತಕೆ ನೀನೆನಗುಂಟು,

ಎಂದು ಹೇಳುವ ಅಕ್ಕ ಈ ಲೋಕ ಪಾಪಿಗಳಿಗೂ ನೇಲೆಯನ್ನು ಕೋಟ್ಟಿರುವಾಗ ನನಗೂ ಒಂದು ನೆಲೆಯನ್ನು ಕೊಟ್ಟಿರುವುದಿಲ್ಲವೇ? ಈ ಲೋಕದ ಒಡೆಯನೆ ನನ್ನ ಆಂತರಂಗದ ಪತಿಯಾದ ಚೆನ್ನಮಲ್ಲಿಕಾರ್ಜುನ ಕಾಯುವಾಗ ಆತ್ಮ ಸಂಗಾತಕ್ಕೆ ನನಗೆ ಆತನಿದ್ದಾನೆ ಎಂದು

ಬದುಕುವ ಆದ್ಯಾತ್ಮನ ದಾರಿಯನ್ನು ತೋರುವ ನಿಲುವನ್ನು ಪ್ರಕಟಿಸುತ್ತಾಳೆ. ಆತ್ಮ ಸ್ಥೈರ್ಯವೇ ಆತ್ಮ ಸಂಗಾತಕ್ಕೆ ಮಿಲನದ ಹಾದಿ ಎಂಬುದನ್ನು ಕಂಡಿರುವ ಅಕ್ಕ ಹಸಿವೆಗೆ ತೃಷೆ ಶಯನಕ್ಕೆ ಹೆದರುವುದಿಲ್ಲ. ಇನ್ನು ಆಕೆಯ ಪತಿಯ ಹುಡುಕಾಟದಲ್ಲಿ ಆಕೆ ಪಡುವ ಯಾತನೆಯು ಆಕೆ ಅನುಭವಿಸುವ ನೋವು ವಿರಹವೇದನೆಗಳ ಆಗರ ಹೃದಯ ವಿದ್ರಾವಕವಾದುದು.

ಅಳಿ ಸುಂಕುಳವೇ ಮಾಮರವೇ ಬೆಳದಿಂಗಳೇ
ಕೋಗಿಲೆಯೇ ನಿಮ್ಮ ನಿಮ್ಮನೆಲ್ಲರನ್ನು ಒಂದು ಬೇಡುವೆನೆಂ
ತೆನ್ನೊಡೆಯ ಚೆನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋರಿರೆ:

ಎಂದು ಪ್ರಕೃತಿಯ ಒಡಲನ್ನು ಕಾಡಿನಲ್ಲಿ ಬಿಟ್ಟು ಸೀತೆಯ ರೋಧನೆಗೆ ಸಮವಾಗಿ ಪ್ರಕಟಗೊಳ್ಳುತ್ತದೆ. ಹುಲು ಮಾನವ ನಿಂದ ಸಾದ್ಯವಾಗದು ಅಳಿಸಂಕುಲಗಳಲ್ಲಿ ಮಾಮರದ ಕೋಗಿಲೆಯ ಧ್ವನಿಯಲ್ಲಿ ಬೆಟ್ಟಗುಡ್ಡಗಳು ತನ್ನ ಅಂತರಂಗದ ಒಡೆಯನನ್ನು ನೋಡುವ ಪರಿ ವಿನೂತನವಾದುದ್ದು ನಂತರ ಆಕೆ ಕಲ್ಯಾಣಕ್ಕೆ ನಡೆಯುವ ಸನ್ನಿವೇಶ ಅಲ್ಲಿ ಆಕೆಯನ್ನು ಪರೀಕ್ಷೆಗೆ ಒಳಪಡಿಸುವ ಎಲ್ಲಾ ತೆರನಾದ ಪರೀಕ್ಷೆಗಳನ್ನು ಗೆಲ್ಲುವ ಅಕ್ಕ ತನ್ನ ಸ್ವ ವಿಮರ್ಶೆಯ ಮೂಲಕವೇ ಸಮಾಜದ ಡೊಂಕನ್ನು ತಿದ್ದುವ ಕಾರ್ಯದಲ್ಲಿ ತೊಡಗುತ್ತಾಳೆ.

ಅಕ್ಕನಂತಹಾ ಅನುಭಾವಿಯ ಅಂತರಾತ್ಮನನ್ನು ಅರಿಯಲು ಶ್ರೇಷ್ಠ ಮಟ್ಟದ ಅನುಭಾವಿಗಳಿಗೆ ಮತ್ರ ಸಾದ್ಯ ಸಾಹಸದ ಸಾದಕರಿಗೆ ಅಕ್ಕನ ಪರಿಪೂರ್ಣ ವ್ಯಕ್ತಿತ್ವದ ದರ್ಶನವಾಗುತ್ತದೆ. ಸ್ವಾನುಭಾವಿಗಳಾದ ಸಾಧಕ ಶರಣರು ಅಕ್ಕನ ವ್ಯಕ್ತಿತ್ವದ ಸತ್ವ ವಿಶೇಷಗಳನ್ನು ಸರಿಯಾಗಿ ಗುರುತಿಸಿದ್ದಾರೆ. ತಮಗಾದ ಆನಂದ ಆಶ್ಚರ್ಯ ಗೌರವ ಭಾವಗಳನ್ನ ತಮ್ಮ ವಚನಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅಕ್ಕಮಹಾದೇವಿ ವೀರ ವಿರಾಗಿಣಿ ಜವ್ವನದ ಹೋರಮಿಂಚಿನಲ್ಲಿಯೇ ಕಾಮವನ್ನು ಸುಟ್ಟುರುಹಿ ಮನಸಿಜನ ಹಣೆಯಬರಹವ ತೊಡೆದು ಅದ್ಭುತ ವೈರಾಗ್ಯ ನೀಧಿಯಾದವಳು ಅಕ್ಕಮಹಾದೇವಿ ತಂದೆ ತಾಯಿ ಬಂದು ಬಾಂದವರು ಸಕಲ ಅಷ್ಟೈಶ್ವರ್ಯವನ್ನ ಎಳೆವಯದಲ್ಲಿಯೇ ತೋರೆದು ಆತ್ಮೋದ್ದರಕ್ಕಾಗಿ ತನ್ನ ಅಂತರಂಗದ ಒಡೆಯ ಚನ್ನಮಲ್ಲಿಕಾರ್ಜುನನ್ನು ಅರೆಸಿಕೋಂಡು ಬಂದ ಅಕ್ಕನ ವೈರಾಗ್ಯವನ್ನ ಆದ್ಯಾತ್ಮಿಕ ಸತ್ವವನ್ನು ಒರೆಗೆಹಚ್ಚಿ ನೋಡಿದ ಅಲ್ಲಮಪ್ರಭು ಅಕ್ಕನ ಸುಜ್ಞಾನ ನಿಜಭಕ್ತಿ ಆಕೆಯ ಸ್ವ–ಅನುಭವಗಳನ್ನು ಕಂಡು ನಮೋ–ನಮೋ ತಾಯಿ ಎಂದು ನಮನಗಳನ್ನು ಸಲ್ಲಿಸಿರುವುದು ಇತಿಹಾಸದ ಪುಟ ಸೇರಿದೆ. ಅಕ್ಕ ತನ್ನ ತಾನರಿದು ನೀಜ ಶಕ್ತಿಯಾದುದನ್ನ ಪ್ರಭು ಗುರುತಿಸಿ ಗೌರವಿಸಿದ್ದಾರೆ.

ವೈರಾಗ್ಯವು ತ್ಯಾಗ ಮೂಲವಾದುದು ಅದು ಸರ್ವರಿಗೂ ಸಾಧ್ಯವಿಲ್ಲದ ಮಹಾ ಸಾಹಸ. ಅದಕ್ಕೆ ಅಪಾರ ನಿಷ್ಠೆ ಸಂಯಮ ಮಾನಸಿಕ ಬಲ ಆತ್ಮಸ್ಥೈರ್ಯ ಅಂತಃಶಕ್ತಿಯ ಬೆಂಬಲವಿಲ್ಲದೆ ಸಾಧ್ಯವಾಗದು. ಅಕ್ಕಮಹಾದೇವಿ ತನ್ನ ಕಾಯ ಜೀವ ಪ್ರಾಣ ಮನ ಭಾವಗಳನ್ನು ನಿವೃತ್ತಿಗೊಳಿಸಿಕೋಂಡು ಭಾವ ದಿಗಂಬರತ್ವಸಾಧಿಸಿಕೊಂಡ ಬಯಲು ದೇಹಿ. ತ್ರಿಕರ್ಣಗಳನ್ನು ತಿಳಿಗೊಳಿಸಿಕೊಂಡು ಶಿವ ಭಾವದಲ್ಲಿ ನೆಲೆನಿಂತ ಪರಮ ಸುಜ್ಞಾನಿ. ಅಕ್ಕನ ವ್ಯಕ್ತಿತ್ವದ ಇಂತಹ ಪರಮ ದರ್ಶನವನ್ನ ಬಸವಣ್ಣನವರು ತಮ್ಮ ವಚನಗಳಲ್ಲಿ ಪಡೆಮೂಡಿಸಿದ್ದಾರೆ ಅಕ್ಕನ ವ್ಯಕ್ತಿತ್ವವನ್ನು ಉಜ್ವಲ ನಕ್ಷತ್ರವೆಂದು ಬಣ್ಣಿಸಿದ್ದಾರೆ.

ಮಹಾಜ್ಞಾನಿ ಚನ್ನಬಸವಣ್ಣನವರು ಅಕ್ಕಮಹಾದೇವಿ ದಿಟ್ಟ ಹೆಜ್ಜೆಯನ್ನು ಕಂಡು ಕಿರಿವಯದಲ್ಲಿಯೇ ಹಿರಿಯತನವನ್ನು ಸಾಧಿಸಿಕೊಂಡ ಅಕ್ಕಮಹಾದೇವಿ ತೀಕ್ಷ್ಣ ಮತಿಯು ಕಂಡಿವಾದಿಯು ಆಗಿರುವ ಅಕ್ಕ ತನ್ನ ಸುಜ್ಞಾನ ಸಚ್ಚಾರಿತ್ರ್ಯಗಳಿಂದ ಇತಿಹಾಸದ ಪುಟ ಸೇರಿದ್ದಾಳೆ ಹೀಗೆ ಅಕ್ಕನ ವಚನಗಳ ಭಾವ ಸಂಪತ್ತನ್ನು ಆಕೆಯ ವ್ಯಕ್ತಿತ್ವದ ಅಂತಃಶಕ್ತಿಯನ್ನು ಕುರಿತು ಹೇಳುವ ಮಹಾಜ್ಞಾನಿ ಚನ್ನಬಸವಣ್ಣನವರ ತೂಕ ಬದ್ಧಮಾತುಗಳು ಅಕ್ಕನ ನಿರ್ವಚನ ಸಾಮತ್ರ್ಯವನ್ನು ತೂಗಿ ಹೇಳುವ ವಿರ್ಮಶಕ ನುಡಿಗಳಂತಿವೆ.

ಅಕ್ಕಮಹಾದೇವಿ ಎಂಬ ವೀರ ಮಹಿಳೆ ನಮ್ಮ ಮಧ್ಯ ಅದೆಷ್ಟೊ ಹೋರಾಟದ ಹಾದಿಗಳನ್ನು ತೆರೆದಿಟ್ಟಿರುವುದು ಅವುಗಳನ್ನು ಸಾಕಾರಗೊಳಿಸುವ ವಿಮೊಚನೆಯ ಕಡೆಗೆ ಒಬ್ಬ ಮಹಿಳೆ ನಡೆದಾಗ ಭವ ಬಂಧನಗಳ ಅಡ್ಡಿ, ಸಂಸಾರ, ಭೋಗ ಇವುಗಳನ್ನು ಮೀರಿ ತ್ಯಾಗಕ್ಕೂ ಸಿದ್ದ ಎಂಬುದನ್ನು ತನ್ನ ಜೀವನವನ್ನೆ ಸಾಕ್ಷಿಯಾಗಿ ವಚನ ಗೈದ ಸ್ತ್ರೀ ಸಂವೇದನಾ ಅಭಿವ್ಯಕ್ತಿಯ ಮೊದಲ ದಾಖಲೆಯಾಗಿ ಮೊದಲ ವಚನಕಾರ್ತಿಯಾಗಿ ಮೊದಲ ಕವಿಯಿತ್ರಿಯಾಗಿ ಇಂದಿಗೂ ಸೋತ ಹೆಣ್ಣಿಗೆ ಬೆಳಕಾಗಿ ಪದೇ ಪದೇ ಗೆಲುವಿನ ದಾರಿಗೆ ದೀಪವಾಗುವ ಅಕ್ಕ ಜೀವನ ಸಾರ್ತಕತೆಯ ಸಾಕಾರ ಮೂರ್ತಿಯಾಗಿ ನಮ್ಮ ಮಧ್ಯ ಇಂದಿಗೂ ಜೀವಂತವಾಗಿ ಇರುವಂತೆ ಮಾಡಿದ ಆಕೆಯ ತ್ಯಾಗ ಗುಣ ಅನುಕರಣಿಯ ಮತ್ತು ತನ್ನದಾದ ನೆಲ ಇಂತಹ ಹೆಣ್ಣಿಗೆ ಜನ್ಮ ನೀಡಿದ ಪುಣ್ಯ ಭೂಮಿ ಎಂಬುದನ್ನು ಎದೆ ಉಬ್ಬಿಸಿ ಹೇಳುವಂತೆ ಮಾಡಿದಾಗ ಆ ತಾಯಿಗೆ ಕನ್ನಡ ಸಾಹಿತ್ಯ ಅಬ್ಯಾಸಿಯಾದ ನನ್ನ ಪ್ರಣಾಮಗಳು.

**ಆಧಾರ ಗ್ರಂಥಗಳು :**

ISSN-2454-678X

ಸಂಪುಟ–3 ಸಂಚಿಕೆ–3, ಎಪ್ರೀಲ್ 01, 2016 ರಿಂದ ಮೇ 15, 2016

೧. **ಅಕ್ಕಮಹಾದೇವಿ: ಮಹಿಳಾ ಸಂವೇದನೆ** ಸಂ.ಡಾ.ಟಿ.ಎಂ.ಭಾಸ್ಕರ ಡಾ.ಎಸ್.ಬಿ.ಚನ್ನಗೌಡ್ರ ಬಸವೇಶ್ವರ ಪೀಠ. ಕರ್ನಾಟಕ ವಿ.ವಿ.ಧಾರವಾಡ–2015

೨. **ಕದಳಿ ಕರ್ಪೂರ**: ಡಾ.ಹೆಚ್.ತಿಪ್ಪೇರುದ್ರಸ್ವಾಮಿ ಸಪ್ನ ಬುಕ್ ಹೌಸ್ ಬೆಂಗಳೂರು–1996

೩. **ಶಿವಶರಣೆಯರ ವಚನಗಳ ವಿಭಿನ್ನ ನೆಲೆಗಳು** ಸಂ.ಡಾ.ವೀರಣ್ಣ ರಾಜುರ ಶ್ರೀ.ಬಸವರಾಜ ಹೂಗಾರ ಬಸವೇಶ್ವರ ಪೀಠ. ಕರ್ನಾಟಕ ವಿ.ವಿ.ಧಾರವಾಡ–2005

೪. **ಕನ್ನಡ ಸಾಹಿತ್ಯ ಚರಿತ್ರೆ** : ರಂ.ಶ್ರೀ.ಮುಗಳಿ ಉಷಾ ಸಾಹಿತ್ಯ ಮಾಲೆ ಮೈಸೂರು– 1999

೫. **ಕನ್ನಡ ಸಾಹಿತ್ಯ ಚರಿತ್ರೆ** : ತ.ಸು.ಶಾಮರಾಯ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಮೈಸೂರು–2001

೬. **ಕನ್ನಡ ಸಾಹಿತ್ಯ ಸಮೀಕ್ಷೆ** : ಜಿ.ಎಸ್.ಶಿವರುದ್ರಪ್ಪ ಬೆಂ.ವಿ.ವಿ.ಬೆಂಗಳೂರು –1974

೭. **ಅಕ್ಕಮಹಾದೇವಿ**.: ಡಾ.ವಿಜಯಶ್ರೀ ಸಬರದ ಮಿಂಚಿನಬಳ್ಳಿ ಪ್ರಕಾಶನ ಧಾರವಾಡ. 1995

೮. **ಅಕ್ಕಮಹಾದೇವಿ ಮತ್ತು ಮೀರಾಬಾಯಿ** : ಡಾ.ದ್ರಾಕ್ಷಾಯಿಣಿ ಯಡಹಳ್ಳಿ ಚೇತನ್ ಬುಕ್ ಹೌಸ್ ದಾವಣಗೇರಿ–1996.